“ರಂಗಕೊಳಲನೂದಲಾಗಿ ಕೀರ್ತನೆಯ ಒಳನೋಟ”

– ಶ್ರೀ ಧ್ರೂವಾಚಾರ್ಯ ಕಾಖಂಡಕಿ

“ರಂಗ ಕೊಳಲನೂದಲಾಗಿ” ಇದು ಭಾಗವತ ದಶಮಸ್ಕಂದ ಪೂರ್ವಾರ್ಧದಲ್ಲಿ ವರ್ಣೀತವಾದ ಒಂದು ಸುಂದರ ಸನ್ನಿವೇಶ. “ದಾಸವರ್ಯರ” “ಭಾಗವತ” ಎನ್ನುವ ಕೃತಿಯೇ ಒಂದು ಅಪೂರ್ವ ಗ್ರಂಥ, ಗ್ರಂಥದಲ್ಲಿ ಬಿಡಿ ಬಿಡಿ ಕಥೆಗಳಂತೆ ಅಪರೂಪದ ಸನ್ನಿವೇಶಗಳು ಕಲ್ಪನಾತೀತವಾಗಿ ದೃಶ್ಯಕಾವ್ಯಗಳಂತೆ ನಿಂತಿವೆ. ದಾಸರ “ಭಾಗವತ” ಕೃತಿಯ ರಚನೆಗೆ ಒಂದು ಅಪರೂಪ ಹಿನ್ನಲೆ ಇರಬೇಕು ಸದಾ – ಸರ್ವದಾ ಭಾಗವಂತನನ್ನು ಧ್ಯಾನ ಮಾಡುತ್ತಿದ್ದ ದಾಸರಿಗೆ ಮನಸ್ಸಿನಲ್ಲಿ ಒಂದು ಭಾವನೆ ಹಗಲಿರುಳು ಹಿಡಿದು ಮಿಡಿಯುತ್ತಿತ್ತು. ಒಂದು ಅಗಾಧ ಆಶೆ ಕೂಡ ಅಂಕುರಿಸಿತ್ತು. ಅದು ಅವರ ಅಂತರಂಗದಲ್ಲಿ ಪ್ರತಿಷ್ಠಾಪಿತನಂತೆ ಕುಳಿತಿದ್ದ ಶ್ರೀನಿವಾಸನನ್ನು ಕೃಷ್ಣರೂಪಿಯಾಗಿ ನೋಡಿ ಆನಂದಿಸಿ ಅವನು ಹುಟ್ಟಿ ಬೆಳೆದ, ಆಡಿದ ನೆಲ, ಅವನ ಪುಟ್ಟ ಹೆಜ್ಜೆ ಇಟ್ಟು ಓಡಾಡಿದ ಪವಿತ್ರ ನೆಲ, ಜನ, ನದಿ, ನದಿತೀರ, ವೃಂದಾವನ, ಮಧುರೆ, ದ್ವಾರಕೆ ಇವುಗಳನ್ನು ನೋಡದೆ ಹೇಗಿರಲಿ? ಎಂಬ ಹಂಬಲ ಹೆಚ್ಚಿದಾಗ ಅವರು ಹೆಗಲಿಗೆ ತಂಬೂರಿ ಹಾರೆ, ದಿನಗಳ ಮೇಲೆ ದಿನಗಳ ಪ್ರಯಾಣಮಾಡಿ ಮಧುರೆ, ವೃಂದಾವನ, ಗೋಕುಲ, ದ್ವಾರಕ ಎಂದು ಬಂದು ನೋಡಿ ಎದೆ ತುಂಬಿ ಅವುಗಳ ಸಾನ್ನಿಧ್ಯದಲ್ಲಿ ದ್ವಾಪರಯುಗಕ್ಕೆ ಹೋದಂತೆನಿಸಿ ಅನನ್ಯತೆ, ತನ್ಮಯತೆಯ ಭಾವ ತುಂಬಿ ಅವರ ಅಂತರಂಗದ ಕಣ್ಣಿನ ಮುಂದೆ ಭಾಗವತ ದೃಶ್ಯಗಳು ಮೂಡುತ್ತ ಹೋಗುತ್ತವೆ. ಶ್ರೀ ಕೃಷ್ಣನ ಬಾಲರೂಪ, ಬಾಲಲೀಲೆ, ಅಮೋಘವಾದ ದೃಶ್ಯಗಳು ಚಿತ್ರದಂತೆ ತೇಲಿ ಬರುತ್ತವೆ. ಒಳಮನಸ್ಸಿನ ಅರಿವಿನಲ್ಲಿ ಯಮುನೆಯ ತಟದ ಮೇಲೆ ನಿಂತು ನೋಡುತ್ತಿದ್ದರೆ, ಕೃಷ್ಣನ ಕೊಳಲಿನ ಧ್ವನಿ ಇನ್ನೂ ಮಧುರವಾಗಿ ಕೇಳಿದಂತೆ ಅನಿಸುತ್ತದೆ. ತನ್ನ ಒಳಗಿನ ಪ್ರಜ್ಞೆಗೆ ಎಷ್ಟು ಇಂಪಾಗಿ ಕೇಳುತ್ತಿದೆ. ಆ ಕೊಳಲಿನ ಮಧುರಕ್ಕೆ ಯಮುನೆಯ ಹರಿವಿನಲ್ಲಿ ಆ ನೀರಿನ ಚೆಲುಮೆ ಒಳಗಿನ ಒರತೆ ಉಕ್ಕಿ ಉಕ್ಕಿ ಬರುತ್ತಿದೆ. ಗೋವುಗಳೆಲ್ಲ ಕಿವಿ ನಿಮಿರಿಸಿ ನಿಂತಂತೆ ಗೋಪಿಕೆಯರು ಧ್ಯಾನದಲ್ಲಿ ಮಗ್ನರಾದಂತೆ. ಎಂಥಹ ಸೆಳೆವು ಆ ಮೋಹನರಾಗದಲ್ಲಿ, ಬೃಂದಾವನ ನೆಲೆದಲ್ಲಿ ನಿಂತು ಹೇಳುತ್ತಾರೆ ದಾಸರು.

“ವೃಂದಾವನದಿ ಮುಕುಂದನಾಲಯದ ಮುಂದೆ
ದಿಗಿ – ದಿಗಿತ ವಾದ್ಯ ವಂದನೆ ತಂದೆ
ಶ್ರೀಪ್ರಸನ್ವೇಂಕಟೇಂದ್ರ ಮುದ್ರಾಂಕ ಹೊಂದುವ
ಜನುಮವಾನಂದ ಮುನಿಮತವ ॥

ಈ ಸಂಚಾರದ ಅನುಭವ ದಾಸರ ಒಳಮನಸ್ಸಿನಲ್ಲಿ ಭಾಗವತದ ಕಥೆಯಾಗಿ ಹರಳು ಗಟ್ಟುತ್ತಾ ಹೋಯಿತು. ಭಾಗವತದ ಅಧ್ಯಾಯಗಳು ಕಣ್ಮುಂದೆ ದೃಶ್ಯಗಳಂತೆ ಸ್ಫುಟವಾಗುತ್ತಾ ಹೋಯಿತು.

ರಂಗ ಕೊಳಲನೂದುವ ಗಾನ ಮಾಧುರ್ಯ ಕೂಡ ಅವರ ಅನುಭಾವಕ್ಕೆ ಬಂದು, ಪದ್ಯದ ರೂಪದಲ್ಲಿ ಅನುಭುತ್ತಿಯಾಗುತ್ತಾ ಬಿಚ್ಚಿಗೊಂಡಿತ್ತು. ಪ್ರಸ್ತುತ ಭಾಗವತದಲ್ಲಿ ಈ ವೇಣುಗೋಪಾಲ ವೇಣುವಿನ ವರ್ಣನೆ ಬಹಳ ಸೊಗಸಾಗಿ ಮಾಡಿದ್ದಾರೆ.

ವೇಣುಗೋಪಾಲನ ವೇಣು ವರ್ಣಿಪಾರು
ಜಾಣೆಗೋಪಿಯರೆಲ್ಲ ಗಾನಾಮೃತವನುಂಡು
ಬಾಣಪಂಚಕನ ಬಾಣದಟ್ಟುಗಳಿಗೆ
ಪ್ರಾಣಡೆಂಢೆಣಿಸಿ ಧ್ಯಾನಿಪರು ॥ಪ॥

ಎಂದು ಒಂಭತ್ತು ನುಡಿಗಳಲ್ಲಿ ಶ್ರೀಕೃಷ್ಣ ವೇಣುನಾದದ ಮಧುರ ಕಂಪನವನ್ನು ಅದರಿಂದ ಸುತ್ತಲಿನ ಪ್ರತಿ ಜೀವ ಜಂತುಗಳ ಮೇಲೆ ಬೀರಿದ

ಘಾಢ ಪ್ರಭಾವವನ್ನು ವರ್ಣಿಸಿದ ರೀತಿ ಅಮೋಘವೇ ಸರಿ. ಭಕ್ತಿ ರಸಕ್ಕೆ ಕನ್ನಡ ಒಪ್ಪಹಾಕಿದ ಕೀರ್ತನೆಯಿದು.

ಇವರ ಸಂಗೀತದ ಸವಿಯನ್ನು ಬಲ್ಲವರು ಅದರಿಂದ ಇವರ ಹಾಡಿನಲ್ಲಿ ಭಕ್ತಿರಸದೊಡನೆ ರಾಗವು ಕೂಡ ಮಿಳಿತಗೊಂಡು ಆ ವೇಣುನಾದದ ಸವಿಯನ್ನು ಎಲ್ಲರಿಗೂ ಉಣಬಡಿಸಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ ಅದಕ್ಕೆ ಅನುಭವದ ರೂಪವಾಗಿ ನಮಗೆ ಸಿಗುವದು.

"ರಂಗಕೊಳಲನೂದಲಾಗಿ –
ರಂಗಯ್ಯಕೊಳಲನೂದಲು" ಮಂಗಳ–
ಮಯವಾಯಿತು ಧರೆ – ಜಗಂಗಳ ಜೀವರು
ಚೇತನ ಮರೆದು ರಂಗಧ್ಯಾನ ಪರರಾದರು"

ಆ ಪದಗಳ ಲಾಲಿತ್ಯದ ಹಿಂದಿದ್ದ ಅರ್ಥ ಭಾವನೋಡಿದರೆ ಆ ಭಗವಂತ ಕೊಳಲನೂದಿದ ನಾದಕ್ಕೆ ಜಗತ್ತು ಮಂಗಳಮಯವಾಯಿತಂತೆ ಆ ನಾದದ ಇಂಪು, ನಾದದ ಗುಂಗು, ಬರೀ ಆ ಪರಿಸರಕ್ಕಷ್ಟೆ ಅಲ್ಲ ಇಡಿ ಜಗತ್ತೆ ನಾದಮಯವಾಗಿ ಪ್ರತಿ ಜೀವಿಯ ಮನದಲ್ಲಿ ಝೇಂಕಾರವಾಗಿ ಜಗತ್ತಿನ ಚರಾಚರ ಜೀವಿಗಳು ಅಚೇತನದಂತಿದ್ದವರು ಚೇತನರಾಗಿ ಆ ನಾದಕ್ಕೆ ಮೋಹಗೊಂಡು – ಅನನ್ಯ ಭಕ್ತಿಯಿಂದ ಶ್ರೀಹರಿಯ ರಂಗ ಧ್ಯಾನ ಪರರಾದರು.

ಭಗವಂತ ಆ ಕೊಳಲುನಾದದಲ್ಲಿ "ಬಾಡಿದ ಬರಡಾದ ಬಳ್ಳಿಮರಗಳನ್ನು ಗೊನೆ ಒಡೆಸಿ ಚಿಗುರಿಸುವ ಜೀವತ್ವದ ಶಕ್ತಿ ಇದೆಯಂತೆ

"ತೀಡುವ ಮಂದಮಾರುತನ ಕೂಡಿ
ತೂಗಾಡಿದವಲರಫಲದ ಗೊಂಚಲು
ಹಾಡಲೊಲ್ಲವಳಿ ಕುಲಗಳು"

ಇದನ್ನೆ ಭಾಗವತದಲ್ಲಿಯ

" ಚೂತಪ್ರವಾಳಾ ಬರ್ಹೋತ್ವಲತಾವರೆ
ಪ್ರೀತಿಲಿ ಮೂಡಿದ ನಾಥಗೋಪಾಲನ
ಗೀತಕೆ ಭೂರುಹವ್ರಾತಲತೊಳು "

ಎಂದು ನಿಸರ್ಗದ ತರು – ಲತೆಗಳು ಕೂಡ ಚೇತನಗೊಂಡು ನರ್ತಿಸಿದುವಂತೆ

"ಹೇಡಿಗೊಂಡವು ಜ್ವಾಣಕ್ಕೆ ಗಿಣಿಯು
ಮಾತಾಡದೆ ಗಳಗುಂದಿದವು ಕೋಗಿಲೆ
ಓಡಾಟ – ವೈರಾಟ ಬಿಟ್ಟು ಖಗ ಮೃಗವೆಲ್ಲ
ಗಾಢ ನಿದ್ರಾವಶವಾದವು.

ಪಕ್ಷಿ – ಗಿಳಿ ಹಿಂಡು ಕೋಗಿಲೆಯೂ ಕೂಡ ತಮ್ಮ ಸವಿ ಕಂಠದ ಸದ್ದನ್ನು ಹಾಡುವದನ್ನು ಮರೆತು ಆ ವೇಣುನಾನಾದ ಮಾಯೆಗೆ ಮರುಳಾಗಿ ಕಳೆಗುಂದಿದುವಂತೆ ಖಗ ಮೃಗಗಳೆಲ್ಲ – ಕಾಡಿನ ಕ್ರೌರ್ಯ ಮೃಗಗಳೆಲ್ಲ ತಮ್ಮ ಓಡಾಟ – " ವೈರಿತನದ ಭಾವ – ಕ್ರೌರ್ಯದ ಕಠೋರ ಭಾವವನ್ನು ಮರೆತು . ಆ ಶ್ರೀಹರಿಯ ಕೊಳಲಿನ ನಾದಕ್ಕೆ ಮನಸೋತು ಗಾಢನಿದ್ರೆಗೆ ತೆರಳಿದವಂತೆ. ಕಠೋರತೆಯನ್ನು ಕೂಡ ಮೃದುತ್ವಗೊಳಿಸುವ ಶಕ್ತಿ – ಆ ವೇಣನಾದಕಿತ್ತು ಎನ್ನುತ್ತಾರೆ ದಾಸರು

" ಕೆಳಗಿನುದ ಉಕ್ಕೇರಿ ಬಂದಾವೋ
ತುಳಕಿ ಚೆಲ್ಲಾಡಿ ನಿಂತಳು ಯಮುನೆ
ಮೇಲೊಡೊಡ್ಡಿ ಮೈ ಗಾಳಿ ದಾರಿಟ್ಟವು ಕಲ್ಲು ಕರಗಿ
ನೀರಾಯಿತು ॥ ಪ ॥

ಸಾವಧಾನವಾಗಿ ಹರಿಯುತ್ತಿರುವಯ ಯಮುನೆ ಒಳಗಿನ ನೀರಿನ, ಒಳಗಿನ ಒರತೆ ಸುಳುಹು, ಆ ಮೋಹನನಾದಕ್ಕೆ ಆಕರ್ಷಿತವಾಗಿ ಉಕ್ಕುಕ್ಕಿ ಹರಿದು ತುಳುಕಿ ಚೆಲ್ಲಾಡಿ ನಿಂತಳಂತೆ ಅಷ್ಟು ಅವಳ ಒಳಗಿನ ಸಂತಸ, ಎದೆ ತುಂಬಿ ಹರಿದಂತೆ ಆ ಕೊಳಲಿನ ನಾದಕ್ಕೆ ಮನಸೋತಳಂತೆ, ಅಷ್ಟಲ್ಲದೆ ಮೇಲಿನ ಮೋಡಗಳೆಲ್ಲ ನೀರಾಗಿ, ಧಾರೆಯಾಗಿ ಹರಿದು ಆ ಧಾರೆಯೊಡನೆ ಕಲ್ಲುಗಳು ಕೂಡ ಕರಗಿ ನೀರಾದುವೆಂದರೇ ಆ ವೇಣುನಾದದ ಪ್ರಭಾವ ಪ್ರಕೃತಿಯ ಚರಾಚರಕ್ಕೆ ಹೇಗೆ ಪ್ರಭಾವ ಬೀರಿಬೇಕು ನಮಗೆ ಇಲ್ಲೊಂದು ಪುರಂದರದಾಸರ ಕೀರ್ತನೆ ಕೂಡ ನೆನಪಿಗೆ ಬರುತ್ತದೆ . ಪುರಂದರದಾಸರು ಕೂಡ ಆ ಮುದ್ದು ಮೋಹನನ ಕೊಳಲಿನ ನಾದವನ್ನು ವರ್ಣಿಸಿದ ರೀತಿಯೇ ವಿಭಿನ್ನ.

ಕೊಳಲನೂದುವ ಚದುರನ್ಯಾರೆ ಪೇಳಮ್ಮ
ತಳಿರಂದದಿ ತಾ ಪೊರೆವ ಮಧುಕರಪಿಡಿದು
ಮೇವು ಮರೆತವು ಗೋವುಗಳೆಲ್ಲವು
ಸಾವಧಾನದಿ ಹರಿದಳು ಯಮುನ
ಆವು ರವುತಲಿ – ಗೋವಲರೆಲ್ಲರೂ
ತುರುಗಳ ಕಾಯ್ವ ಕದಂಬವನದೊಳ್.

ಶ್ರೀ ಪ್ರಸನ್ನ ವೆಂಕಟರ ಹಾಡಿನಲ್ಲಿ ಯಮುನೆಯ ಕೆಳಗಿನ ಉದಕ ಕೂಡ ಉಕ್ಕೇರಿ ಹರಿದರೆ ಪುರಂದರದಾಸರ ಹಾಡಿನಲ್ಲಿ ಯಮುನೇ ಸಾವಧಾನವಾಗಿ ಹರಿದ ಚಿತ್ರಣವಿದೆ. ಒಂದೇ ನಾದದ ಅನುಭವ ಒಂದೇ ಚಿತ್ರಣಕ್ಕೆ ವಿಭಿನ್ನ ರೀತಿಯ ಅನುಭವ ಸಾಂದ್ರತೆಯನ್ನು ನೀಡಿದೆ. ಇದೇ ವೇಣುನಾದದ ದಿವ್ಯ ಪ್ರಭಾವ. ಈ ಅನುಭವ ಅನುಭಾವಕ್ಕೆ ಬಂದಾಗ ಮಾತ್ರ ಅದರ ಸತ್ಯತೆ ಗೊತ್ತಾಗುತ್ತದೆ.

ಅಚ್ಯುತನ ಕೃತ್ಯ ನೋಡಲು
ಸುರರಿ ಗಚ್ಚರಿಯಾಯಿತು. ಅವು ಕಂಡಾನಂದ
ಹೆಚ್ಚಿ ಮುಕುಂದನ ಲೀಲಾವಿನೋದಕ್ಕೆ
ಮೆಚ್ಚಿ ಕುಸುಮವ ಸುರಿದರು

ಈ ನಾದದ ಗುಂಗು ಬರಿ ಭೂಮಿಯ ಮೇಲಿನ ಜೀವ ಜಂತುಗಳಿಗೆಲ್ಲ ಆ ನಾದದ ಗುಂಗು ಸುರರನ್ನು (ದೇವತೆ)ಗಳನ್ನು ಬಿಡಲಿಲ್ಲ, ಅದು ಸುರ ಲೋಕಕ್ಕೂ ಹರಡಿ ಇದ್ಯಾವ ಮಾಯೆಯ ಮೋಹವೆಂದು ಅಚ್ಚರಿ ಗೊಂಡ ಸುರರು ಆ ಮುಕುಂದನ ಲೀಲಾ ವಿನೋದಕ್ಕೆ ಮೆಚ್ಚಿ – ಆ ಅಮೃತಮಯವಾದ ನಾದವನ್ನು ಕೇಳಿ ಧನ್ಯರಾದೆವು ಎಂದು ಮೇಲಿನಿಂದಲೇ ಮುಕುಂದನ ಪಾದಕ್ಕೆ ಭಕ್ತಿ ಕುಸುಮಗಳನ್ನು ಸುರಿದರಂತೆ ಇಲ್ಲಿ ಮೇಲಿನ ಪದ್ಯದಲ್ಲಿ **"ಕಲ್ಲು ಕರಗಿ ನೀರಾದವು"** ಎಂಬುದಕ್ಕೆ ಒಂದು ನಿದರ್ಶನ ನೆನವಾಗುತ್ತದೆ. ಪ್ರಸಿದ್ಧ ಸಂಗೀತಗಾರ ತಾನಸೇನನು ದೀಪರಾಗ ಹಾಡಿದರೆ ದೀಪ ಹತ್ತುತ್ತಿರುವದನ್ನು ಮೇಘರಾಗ ಹಾಡಿದಾಗ ಮಳೆಯಾಗಿದ್ದನ್ನು ಹಾಗೂ ಕಲ್ಲು ಕರಗಿ ನೀರಾದ ಸಂಗತಿ ಇತಿಹಾಸದಿಂದ ತಿಳಿದು ಬರುತ್ತದೆ. ಮಾನವರಾದ ಅವರ ಗಾನದ ಪ್ರಭಾವ ಹಾಗಿರುವಾಗ ಇನ್ನು ಶ್ರೀ ಕೃಷ್ಣ ಪರಮಾತ್ಮನೇ ಕೊಳಲನ್ನೂದಿದಾಗ ಕಲ್ಲು ಕರಗಿ ನೀರಾಗುವದು ಏನೂ ಆಶ್ಚರ್ಯವಿಲ್ಲ ಅದೇ ರೀತಿ ಇಲ್ಲಿ ದಾಸರು, **ನಳಿನ, ಚಂಪಕ, ಪುನ್ನಾಗ ಕುಂದ ಪಾಟಲ** ಹೀಗೆ ಅನೇಕ ಹೂಗಳ ಪರಿಚಯ ಮಾಡಿಸಿ ಹೀಗೆ ಹೂಗಳಲ್ಲಿಯೂ ಜೀವ – ಚೇತನ ಮಿಡಿದು ಅವೆಲ್ಲ ತಮ್ಮ ಪರಿಮಳ ಸೂಸುತ್ತ ನಿಲಾಂಗನಂಘ್ರಿಗೆ ನೀಲಮೇಘಶ್ಯಾಮನಾದ ಭಗವಂತ ಪಾದಾರವಿಂದಕ್ಕೆ ಪರಿಮಳ ಬೀರುತ್ತ ಬಂದು ಬಿದ್ದುವಂತೆ ಎನ್ನುವ ಕಲ್ಪನೆಯೇ ಮನಸ್ಸಿಗೆ ಮುದನೀಡುವಂಥದ್ದು, ಇದಲ್ಲದೆ ತಪಸ್ಸಿನಲ್ಲಿದ್ದ ಸಿದ್ಧರು ಮುನಿಗಳು ಈ ವೇಣುನಾದವ ಕೇಳಿ ತಪಸ್ಸಿನ ಸಮಾದಿಯಿಂದೆದ್ದು – ಸಂತೋಷದಿಂದ ಕುಸಿದು ಕುಪ್ಪಳಿಸಿ ಯಾವ ನಾದದ ಗುಂಗು ನಮ್ಮನ್ನು ಹೀಗೆ ಎಚ್ಚರಿಸಿ ಭಗವಂತನೆಡೆಗೆ ಕರೆದುಕೊಂಡು ಹೋಗುತ್ತಿದೆ. ತಮ್ಮೆದೆ ಯದಾವರೆಯ ಸಿಂಹಾಸನದಲ್ಲಿ ಆಸಿನನಾಗಿದ್ದ ಎನ್ನರಸ ಇವನೇ – ಈ ನಾದಲೋಲನೆ – ಈ ನಾದ ನಮ್ಮಭವ ಸಮುದ್ರವನ್ನು ಗೆಲ್ಲಿಸಿ ಮುಕ್ತಮಾರ್ಗದೆಡೆಗೆ ಒಯ್ಯುತ್ತಿದೆ ಎಂದು ಆನಂದದಿಂದ ಕುಣಿದು ಕುಪ್ಪಳಿಸಿದರಂತೆ ಇಲ್ಲಿ ಹೃದಯ ಕಮಲಕ್ಕೆ **"ಎದೆತಾವರೆ"** ಎಂದು ಬಳಿಸಿ ಕನ್ನಡ ಭಾಷೆಯ ಸೊಗಡನ್ನು ದಾಸವರ್ಯರು ಹೆಚ್ಚಿಸಿದ್ದಾರೆ. ಹಾಗೇನು ಮುಂದಿನ ನುಡಿಯಲ್ಲಿ **"ಮುದ್ದು – ಮೋಹನನ್ನು ಮಂಜುಳ ಸಂಗೀತ"** ಈ ಸಾಲಿನಲ್ಲಿ "ಮ" ಕಾರದ ಅನುಪ್ರಾಸವನ್ನು ಕಾಣಬಹುದು ಮುಂದುವರೆದು ದಾಸರು ಹೇಳುತ್ತಾರೆ. ಶ್ರೀ ಕೃಷ್ಣ ಪರಮಾತ್ಮನು ನಾಮಕ್ರಿ, ಗುಂಡಕ್ರಿ ಎಂಬ ಮೇಘರಾಗಗಳನ್ನು ನುಡಿಸಿದ ಎಂದು ಆದರೆ ಮೂಲಭಾಗವತದಲ್ಲಿ ಬ್ರಹ್ಮದೇವರು, ರುದ್ರದೇವರು ಯಾವ ರಾಗದಲ್ಲಿ ಕೊಳಲನೂದಿದ ಎಂದು ಒಂದು ಕ್ಷಣ ವಿಚಾರ ಮಾಡಿದರೆಂದು ಹೇಳಿದೆ. ಇಲ್ಲಿಯೂ ದಾಸರ ಪಾಂಡಿತ್ಯವನ್ನು ಕಾಣಬಹುದು. ಹೀಗೆ ದಾಸರು ಹೊಸ ಹೊಸ ವಿಷಯಗಳನ್ನು ಈ ಹಾಡಿನಲ್ಲಿ ತಿಳಿಸಿದ್ದಾರೆ. ಕೊನೆಯ ಸಾಲುಗಳಲ್ಲಿ "ಮಧು ಕುಂಜವನದಲ್ಲಿ ತ್ರಿಭಂಗಿಯಲಿ ಹೆಮಾಂಬರ– ವನುಟ್ಟು ಕಸ್ತೂರಿನಾಮ ಗಂಧ ಮುಕುಟ ಮಣಿಗಳಿಂದ ಅಲಂಕೃತನಾದ ಪರಮಾತ್ಮನು

ಮೇಲಿನ ಮೇಘರಾಗಗಳನ್ನು ನುಡಿಸಿದಾಗ ಆ ಗಾನದ ಮಾಧುರ್ಯಕ್ಕೆ ಸಾಮವೇದಗಳು ಕೂಡ ನಮೋ – ನಮೋ ಎಂದು ಕೈ ಜೋಡಿಸಿದುವಂತೆ ಶ್ರೀ ಪ್ರಸನ್ವೆಂಕಟ ದಾಸರು ರುದ್ರಾಂಶ ಸಂಭೂತರು ಸಾಕ್ಷಾತ್ ಶ್ರೀನಿವಾಸನಿಂದಲೇ ಅಂಕಿತ ಪಡೆದವರು. ಮತ್ತು ಶುಕರೂಪದಿಂದ ಭಾಗವತದ ಉಪದೇಶವನ್ನು ಶ್ರೀವೇದವ್ಯಾಸರಿಂದ ಪಡೆದವರೆಂದ ಮೇಲೆ ಅವರ ಜ್ಞಾನದ ಭಂಡಾರ ಹೇಗಿದ್ದೀತು ಶುಕಾಚಾರ್ಯರಾಗಿ ಸಮಸ್ತ ಭಾಗವತವನ್ನು ಪರೀಕ್ಷಿತರಾಜನಿಗೆ ಉಪದೇಶ ಗೈದವರು ಅಂತೆಯೇ ಅವರು ಭಾಗವತವನ್ನು ಕನ್ನಡಿ ಕರಿಸುವಲ್ಲಿ ಅತ್ಯಂತ ಸಮರ್ಥರಾಗಿದ್ದಾರೆ.

ಇನ್ನು ಈ ಕೃತಿಯಲ್ಲಿ ಭಾಷಾಲಂಕಾರ – ಪ್ರಾಸ – ಇಷ್ಟೇ – ಇದೇಯೊ ಅಥವಾ ಎನಾದರೂ ಸಂದೇಶ ಇದೇಯೊ ಎಂದು ನೋಡಿದಾಗ – ಇಲ್ಲಿ ಸಂದೇಶವನ್ನು ಕಾಣಬಹುದು. ಅದು ಶ್ರೀಕೃಷ್ಣ ಪರಮಾತ್ಮನ ಲೀಲೆ **ಅನಂತ ಬ್ರಹ್ಮಾಂಡವನಾಳ್ವದೇವ ಗೋ ಕಾನನದಟಣೆ ಗೋನೀಕರಕ್ಷಣೆ ಮಾನವ ಲೀಲೆ ಗದೇನು ಭೂಷಣವೊ** ಎನ್ನುವಂತೆ ಜಗನ್ನಿಯಾಮಕನಾದ ಅವನು ಇಡಿ ಚರಾ ಚರ ಪ್ರಪಂಚವನ್ನು ತನ್ನ ಒಂದು ವೇಣುನಾದದಿಂದ ಜಗತ್ತನ್ನೆ ಮರುಳು ಮಾಡಬಲ್ಲ ಎನ್ನುವ ಸುಂದರ ಕಲ್ಪನೆಯನ್ನು ದಾಸರು ವರ್ಣಿಸಿದ ರೀತಿ ಚಮತ್ಕಾರಿಯಾಗಿದೆ. ಎಲ್ಲರೂ ಆ ಪರಮಾತ್ಮನಿಗೆ ಅಧೀನ ಅವನು ಆಡಿಸಿದ ಕೈಗೊಂಬೆಗಳು ಎನ್ನುವಂತೆ ಅವನ ವೇಣುನಾದ ಎಂದರೆ ಪುಂಗಿನಾದದಂತೆ ಅದಕ್ಕೆ ಸೆರೆಯಾಗಿ ಮರುಳಾಗಿ ಸಕಲ ಜೀವ ಚರಾ – ಚರರು ಚಲಿಸುತ್ತಾರೆ ಇದು ದಾಸರ ಉದಾತ್ತವಾದ ಒಂದು ಸಂದೇಶ ಕೂಡ.

ಈ ನನ್ನ ಮೂಲ ಹಸ್ತ ಪ್ರತಿಯನ್ನು ಓದಿ, ಭಾಗವತದ ಹಿನ್ನಲೆಯನ್ನು ಅಳವಡಿಸಿ ಈ ಪ್ರಬಂಧವನ್ನು ಪರಿಷ್ಕರಿಸಿದ ಶ್ರೀಮತಿ. ರೇಖಾ ಕಾಖಂಡಕಿಯವರಿಗೆ ನನ್ನ ಕೃತಜ್ಞೆತೆಗಳು.

ಶ್ರೀಧ್ರುವಾಚಾರ್ಯ ಕಾಖಂಡಕಿ

ಆಧಾರ ಗ್ರಂಥಗಳು

1 ಶ್ರೀಪ್ರಸನ್ನವೆಂಕಟದಾಸರು ಮತ್ತು ಅವರ ಕೃತಿಗಳು ಡಾ॥ ವಿ.ಟಿ. ಪಾಟೀಲ ಪಿಹಚ್.ಡಿ.

2 ಸಮಗ್ರ ದಾಸಸಾಹಿತ್ಯ ಸಂಪುಟ 8 ಶ್ರೀಪ್ರಸನ್ನವೆಂಕಟದಾಸರ ಕೀರ್ತನೆಗಳು

3 ಶ್ರೀ ಪ್ರಸನ್ನವೆಂಕಟದಾಸರು ರಚಿಸಿದ ದಶಮ ಸ್ಕಂದ ಭಾಗವತ ಮೈಸೂರು ವಿಶ್ವವಿದ್ಯಾಲಯದ ಪ್ರಕಟನೆ

4 ಶ್ರೀ ಪ್ರಸನ್ನವೆಂಕಟದಾಸರು–ಶ್ರೀಧ್ರುವಾರಾಜಿ ಆ ಕಾಖಂಡಕಿ ಶ್ರೀ ಪ್ರಸನ್ನವೆಂಕಟಮಾಲೆ ಪ್ರಕಟನೆ

**

ಈ ಪ್ರಬಂಧವನ್ನು ಮೊದಲನೆಯ ಅಖಿಲಭಾರತ ಹರಿದಾಸ ಸಾಹಿತ್ಯ ಸಮ್ಮೇಳನ 2013 ಮುಳಬಾಗಿಲು ದಲ್ಲಿ ಮಂಡಿಸಲಾಗಿದೆ.